**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ**

ಸಿ.ಸಿ. ನಂ- 1854/2025

Pw-1

ದಿನಾಂಕಃ 23-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ. ಎ.ಎಮ್.ಎಮ್. ಆರೋಪಿ ಪರ ವಕೀಲರಿಂದ-** ಆರೋಪಿ ಶುಗರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಅವರಿಗೆ ಮಾಸಿಕವಾಗಿ ರೂ.40,000/- ದಿಂದ ರೂ. 50,000/- ವರೆಗೆ ವೇತನ ಪಡೆಯುತ್ತಾರೆ ಎಂದರೆ ಇರಬಹುದು. ಆದ್ದರಿಂದ ಅವರಿಗೆ ಹಣದ ಅವಶ್ಯಕತೆ ಇರುವುದಿಲ್ಲ ಎಂದರೆ ಗೊತ್ತಿಲ್ಲ. ವಾಸು ಅಪ್ಪಾಸಾಬ ನನ್ನ ಜೊತೆ ಪ್ರತಿ ತಾರೀಖಿನಂದು ನ್ಯಾಯಾಲಯಕ್ಕೆ ಬರುತ್ತಾರೆ ಎಂದರೆ ಅವರದು ಮೇಲಿನ ನ್ಯಾಯಾಲಯದಲ್ಲಿ ಒಂದು ಪ್ರಕರಣ ಇದೆ. ನನ್ನ ಜೊತೆ ಒಂದು ಬಾರಿ ನ್ಯಾಯಾಲಯಕ್ಕೆ ಬಂದಿರುತ್ತಾರೆ. ನನಗೆ ಜಮೀನು ಇದೆ ಅಂತಾ ತೋರಿಸಲು ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ನನ್ನ ವಕೀಲರು ನನ್ನನ್ನು ಕೇಳಿಲ್ಲ. ಆ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ರೂ.3,50,000/- ಗಳನ್ನು ಕಬ್ಬಿನ ಬಿಲ್ ಪಾವತಿಯಿಂದ ಬಂದ ಹಣ ಇರುತ್ತದೆ. ಅದರ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-3 ನೋಟೀಸಿಗೆ ಆರೋಪಿ ಪ್ರತ್ಯುತ್ತರ ನೀಡಿದ್ದಾರೆ ಎಂದರೆ ಸರಿ. ಪ್ರತ್ಯುತ್ತರ ನೋಟೀಸು ನೀಡಿದ್ದನ್ನು ಪಿರ್ಯಾದಿಯಲ್ಲಿ ಬರೆಸಿಲ್ಲ. ಪ್ರತ್ಯುತ್ತರ ನೋಟೀಸನ್ನು ನನ್ನ ವಕೀಲರು ನನಗೆ ಓದಿ ಹೇಳಿದ್ದಾರೆ ಎಂದರೆ ಗೊತ್ತಿಲ್ಲ.

ಪ್ರತ್ಯುತ್ತರ ನೋಟೀಸಿನಲ್ಲಿ ತೋರಿಸಿದಂತೆ ಆರೋಪಿ ಹಾಗೂ ವಾಸು ಅಪ್ಪಾಸಾಬ ನ್ಯಾಮಗೌಡ ಇವರ ನಡುವೆ ಹಣದ ವ್ಯವಹಾರ ಆಗಿತ್ತು. ಭದ್ರತೆಗಾಗಿ ಸದರಿ ಚೆಕ್ಕನ್ನು ಆರೋಪಿ ವಾಸು ಅಪ್ಪಾಸಾಬ ಇವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಇವರ ನಡುವೆ ಮನಸ್ತಾಪ ಬಂದಿದ್ದು ಆ ಚೆಕ್ಕನ್ನು ನನಗೆ ನೀಡಿದ್ದು, ನಾನು ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆರೋಪಿ ಸದರಿ ಚೆಕ್ಕನ್ನು ನನಗೆ ನೀಡಿದ್ದರು. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ರೂ.3,50,000/- ಗಳ ಇದರ ಮುಖಬೆಲೆ ರೂ.500/- ಮುಖಬೆಲೆಯ ಒಟ್ಟು ರೂ.1,00,000/- ಹಾಗೂ ಉಳಿದ ಹಣದ ಮುಖಬೆಲೆ ರೂ.100/- ಗಳು ಇರುತ್ತವೆ. ಇದನ್ನು ಪಿರ್ಯಾದಿಯಲ್ಲಿ ಬರೆಸಿಲ್ಲ ಎಂದರೆ ಸರಿ. ತೆರಿಗೆಯ ಬಗ್ಗೆ ಮಾಹಿತಿ ಇದೆ. ರೂ.20,000/- ಗಿಂತ ಅಧಿಕ ಹಣ ವ್ಯವಹಾರ ಮಾಡುವುದನ್ನು ಐಟಿ ರಿಟರ್ನ್ಸ್ ನಲ್ಲಿ ತೋರಿಸಬೇಕು ಎಂಬ ನಿಯಮ ಇದೆ ಎಂದರೆ, ಆರೋಪಿ 2 ದಿನದಲ್ಲಿ ಹಣ ನೀಡುತ್ತೇನೆ ಎಂದು ಹೇಳಿದ್ದರಿಂದ ನಾನು ಹಣ ನೀಡಿರುತ್ತೇನೆ. ಇದನ್ನು ಪಿರ್ಯಾದಿಯಲ್ಲಿ ಬರೆಸಿಲ್ಲ ಎಂದರೆ ಸರಿ. ಆರೋಪಿ ನನ್ನ ಕಡೆಯಿಂದ ಯಾವುದೇ ಹಣ ಪಡೆದಿಲ್ಲ, ಚೆಕ್ಕು ನೀಡಿಲ್ಲ ಎಂದರೆ ಸರಿಯಲ್ಲ. ವಾಸು ಅಪ್ಪಾಸಾಬ ಇವರ ಮಾತುಕೇಳಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

**ಓ.ಹೇ.ಕೆ.ಸರಿ ಇದೆ**

**Sd/-**

**ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.**

**ನ್ಯಾಯಾಧೀಶರು ಜಮಖಂಡಿ.**